# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 936 (1030)

ಮಾನ್ಯ ಸದಸ್ಯರ ಹೆಸರು : ಶ್ರೀ ಯು. ಬಿ. ವೆಂಕಟೇಶ್ (ನಾಮನಿರ್ದೇಶನ ಹೊಂದಿದವರು)

ಉತ್ತರಿಸಬೇಕಾದವರು : ಮುಖ್ಯಮಂತ್ರಿಯವರು

ಉತ್ತರಿಸಬೇಕಾದ ದಿನಾಂಕ : 22/09/2022

***

| ಕ್ರಮ ಸಂಖ್ಯೆ | ಪ್ರಶ್ನೆ | ಉತ್ತರ |
|---|---|---|
| (ಅ) | ಶಿಶುಪಾಲನಾ ರಜೆಯನ್ನು ಸರ್ಕಾರಿ ಮಹಿಳಾ ಅಧಿಕಾರಿ/ನೌಕರರಿಗೆ ಯಾವ ದಿನಾಂಕದಿಂದ ಜಾರಿಗೆ ತರಲಾಗಿದೆ; ಆದೇಶ ಹೊರಡಿಸಲು ನಿರ್ಧರಿತವಾದ ಮಾನದಂಡಗಳೇನು; ಹಾಗೂ ರಜೆ ಮಂಜೂರಾತಿಗೆ ಅನುಸರಿಸುವ ಕ್ರಮಗಳೇನು; (ಆದೇಶದ ಪ್ರತಿ ನೀಡುವುದು) | ಶಿಶುಪಾಲನಾ ರಜೆಯನ್ನು ಸರ್ಕಾರಿ ಮಹಿಳಾ ಅಧಿಕಾರಿ/ ನೌಕರರಿಗೆ ದಿನಾಂಕ: 21/06/2021 ರಿಂದ ಜಾರಿಗೆ ತರಲಾಗಿದೆ.<br>ಸರ್ಕಾರವು 2021-22ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ 37 ರಲ್ಲಿ ರಾಜ್ಯ ಸರ್ಕಾರದ ಮಹಿಳಾ ಉದ್ಯೋಗಿಗಳಿಗೆ ಚಾಲ್ತಿಯಲ್ಲಿರುವ ಪ್ರಸೂತಿ ರಜೆಯೊಂದಿಗೆ ಒಟ್ಟು ಸೇವಾವಧಿಯಲ್ಲಿ ಆರು ತಿಂಗಳವರೆಗೆ ಮಕ್ಕಳ ಆರೈಕೆ ರಜೆಯನ್ನು ಒದಗಿಸಲಾಗುವುದೆಂದು ಘೋಷಿಸಿತ್ತು. ಆಡಳಿತ ಯಂತ್ರದ ಬಹುಮುಖ್ಯ ಭಾಗವಾಗಿರುವ ಮಹಿಳೆಯರ ಕ್ಷೇಮಾಭಿವೃದ್ಧಿಗೆ ಇದು ಪೂರಕ ಹೆಜ್ಜೆಯಾಗಲಿದೆ ಎಂದು ಮತ್ತು ಇದರಿಂದ ಮಹಿಳೆಯರ ಕಾರ್ಯಕ್ಷಮತೆಯು ಹೆಚ್ಚಾಗಲಿದೆ ಎಂದು ಪರಿಭಾವಿಸಲಾಗಿತ್ತು. ಆ ನಿಟ್ಟಿನಲ್ಲಿ ಸರ್ಕಾರ ಈ ಸೌಲಭ್ಯವನ್ನು ಮಂಜೂರು ಮಾಡಿ ಆದೇಶ ಹೊರಡಿಸಿದೆ.<br>ಶಿಶುಪಾಲನಾ ರಜೆಯನ್ನು ಮಹಿಳಾ ನೌಕರರಿಗೆ ಗರಿಷ್ಠ ಆರು ತಿಂಗಳವರೆಗೆ ಅವರ ಮಕ್ಕಳ ಸಂಖ್ಯೆಯನ್ನು ಪರಿಗಣಿಸದೆ, ಅತ್ಯಂತ ಕಿರಿಯ ಮಗುವು 18 ವರ್ಷ ತಲುಪುವವರೆಗಿನ ಅವಧಿಗೆ ಮಾತ್ರ ಮಂಜೂರು ಮಾಡಬಹುದಾಗಿದ್ದು, ಅವರ ಸೇವಾ ಪುಸ್ತಕದಲ್ಲಿ ನಮೂದಿಸಿರುವ ಮಕ್ಕಳ ವಿವರಗಳ ಆಧಾರದ ಮೇಲೆ |

| | | |
|---|---|---|
| | | ಮಂಜೂರು ಮಾಡತಕ್ಕದ್ದಾಗಿರುತ್ತದೆ.<br>ಸಂಬಂಧಿತ ದಿನಾಂಕ: 21/06/2021 ರ ಸರ್ಕಾರಿ ಆದೇಶದ ಪ್ರತಿಯನ್ನು ಅನುಬಂಧ-1 ರಲ್ಲಿ ನೀಡಿದೆ. |
| (ಆ) | ಸರ್ಕಾರಿ ಅಧಿಕಾರಿ/ನೌಕರರಿಗೆ ಲಭ್ಯವಿರುವ ಮಾತೃತ್ವ ಹಾಗೂ ಪಿತೃತ್ವ ರಜೆಗಳ ವಿವರ ಹಾಗೂ ನಿಗಧಿಪಡಿಸಿರುವ ರಜಾ ದಿನಗಳಾವುವು (ಮಾಹಿತಿಯನ್ನು ಒದಗಿಸುವುದು). | ಸರ್ಕಾರಿ ಮಹಿಳಾ ನೌಕರರಿಗೆ ಕರ್ನಾಟಕ ನಾಗರಿಕ ಸೇವಾ ನಿಯಮಾವಳಿಯ ನಿಯಮ 135(1) ರನ್ವಯ ಪ್ರಸೂತಿ ರಜೆಯನ್ನು ಎರಡು ಜೀವಂತ ಮಕ್ಕಳ ಪ್ರಸೂತಿಗೆ ಆರಂಭದ ದಿನಾಂಕದಿಂದ 180 ದಿನಗಳವರೆಗೆ ಮಂಜೂರು ಮಾಡಲು ಅವಕಾಶ ಕಲ್ಪಿಸಲಾಗಿದೆ. ಸಂಬಂಧಿತ ನಿಯಮದ ಪ್ರತಿಯನ್ನು ಅನುಬಂಧ-2 ರಲ್ಲಿ ನೀಡಿದೆ.<br>ಇದೇ ನಿಯಮಾವಳಿಯ ನಿಯಮ 135-B(1) ರನ್ವಯ ಪುರುಷ ಸರ್ಕಾರಿ ನೌಕರನಿಗೆ ಅವನ ಪತ್ನಿಯ ಹೆರಿಗೆ ಕಾಲದಲ್ಲಿ ಎರಡು ಜೀವಂತ ಮಕ್ಕಳ ಪ್ರಸೂತಿಗೆ ಪ್ರತಿ ಬಾರಿಗೆ 15 ದಿನಗಳ ಪಿತೃತ್ವ ರಜೆಯನ್ನು ಮಂಜೂರು ಮಾಡಲು ಅವಕಾಶ ಕಲ್ಪಿಸಲಾಗಿದೆ. ಸಂಬಂಧಿತ ನಿಯಮದ ಪ್ರತಿಯನ್ನು ಅನುಬಂಧ-3 ರಲ್ಲಿ ನೀಡಿದೆ. |
| (ಇ) | "ಶಿಶು" ಪದದ ವ್ಯಾಖ್ಯಾನ ಹಾಗೂ ಶಿಶು ಎಂದು ಪರಿಗಣಿಸಲು ನಿರ್ಧರಿಸಬಹುದಾದ ವಯೋಮಿತಿಯನ್ನು ತಿಳಿಸುವುದು ಮಾನದಂಡವೇನು; (ವಿವರ ನೀಡುವುದು) | ಶಿಶುಪಾಲನಾ ರಜೆಯ ಸೌಲಭ್ಯವನ್ನು ಕಲ್ಪಿಸಿ ಹೊರಡಿಸಿದ ಆದೇಶದ ಉದ್ದೇಶಕ್ಕಾಗಿ 'ಶಿಶು' ಎಂಬ ಪದವನ್ನು ವ್ಯಾಖ್ಯಾನಿಸಿರುವುದಿಲ್ಲ. 18 ವರ್ಷದೊಳಗಿನ ಮಕ್ಕಳನ್ನು ಈ ಆದೇಶದ ಉದ್ದೇಶಕ್ಕಾಗಿ 'ಶಿಶು' ಎಂದು ಪರಿಗಣಿಸಲಾಗಿದೆ. |
| (ಈ) | 1 ಅಥವಾ 2 ವರ್ಷ ವಯಸ್ಸಿನ ಶಿಶು ಹೊಂದಿರುವ ತಾಯಿಗೂ ಹಾಗೂ 16 ಅಥವಾ 17 ವರ್ಷದ ವಯಸ್ಸಿನ ಶಿಶುವಿನ ಮಹಿಳಾ ನೌಕರರಿಗೂ 180 ದಿನಗಳ ಸಮಾನರೂಪದ ರಜೆ ಪಡೆಯಲು ಆದೇಶ ಹೊರಡಿಸಿದಾಗ ತಾರತಮ್ಯವಾಗುವುದಿಲ್ಲವೆ; | ತಾರತಮ್ಯವಾಗುವುದಿಲ್ಲ. 18 ವರ್ಷ ತಲುಪುವವರೆಗಿನ ಯಾವುದೇ ವಯಸ್ಸಿನ ಮಕ್ಕಳ ಆರೈಕೆಯ ಅಗತ್ಯತೆಯನ್ನು ನೀಗಿಸುವ ಆವಶ್ಯಕತೆಯನ್ನು ಮನಗಂಡು ಯಾವುದೇ ತಾರತಮ್ಯವಿಲ್ಲದೆ 18 ವರ್ಷ ತಲುಪುವವರೆಗಿನ ಮಹಿಳಾ ಸರ್ಕಾರಿ ನೌಕರರ ಎಲ್ಲಾ ಮಕ್ಕಳ ಆರೈಕೆಗಾಗಿ ಈ ರಜೆಯ ಸೌಲಭ್ಯವನ್ನು |



Generated from eOffice by G JAGADEESHA ...

995

| | | |
|---|---|---|
| | ಇದಕ್ಕೆ ಮಕ್ಕಳ ವಯೋಮಿತಿ ಆಧಾರದಲ್ಲಿ ಸ್ಲಾಬ್ ಅಳವಡಿಸಿ ರಜೆ ನಿಗಧಿಪಡಿಸಲಾಗುವುದೇ; ಇದನ್ನು ಸರಿಪಡಿಸಲು ಕೈಗೊಳ್ಳಲು ಕ್ರಮಗಳೇನು; | ಕಲ್ಪಿಸಲಾಗಿರುತ್ತದೆ.<br>ಮಕ್ಕಳ ವಯೋಮಿತಿ ಆಧಾರದ ಮೇಲೆ ಪರಿಗಣಿಸಿ ರಜೆ ನಿಗಧಿಪಡಿಸುವ ಯಾವುದೇ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ. |
| (ಉ) | ಪತ್ನಿಯು ನಿಧನ ಹೊಂದಿರುವ ಪುರುಷ ಸರ್ಕಾರಿ ಅಧಿಕಾರಿ/ನೌಕರರಿಗೆ ಶಿಶುಪಾಲನಾ ರಜೆ ಅನ್ವಯಿಸುವುದಿಲ್ಲವೇ; ಇಲ್ಲದಿದ್ದಲ್ಲಿ ತಾರತಮ್ಯವಾಗುವುದಿಲ್ಲವೆ; ಈ ಸಂಬಂಧ ಶಿಶುಪಾಲನಾ ಆದೇಶವನ್ನು ತಕ್ಷಣ ನಿಲ್ಲಿಸಿ, ಆದೇಶದಲ್ಲಿರುವ ಲೋಪದೋಷಗಳನ್ನು ಸರಿಪಡಿಸಿ ಮಾರ್ಪಡಿತ ಆದೇಶ ಹೊರಡಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ? | ಪತ್ನಿಯು ನಿಧನ ಹೊಂದಿರುವ ಪುರುಷ ಸರ್ಕಾರಿ ಅಧಿಕಾರಿ/ ನೌಕರರಿಗೆ ಶಿಶುಪಾಲನಾ ರಜೆ ಅನ್ವಯಿಸುವುದಿಲ್ಲ.<br>ಮೂಲತಃ 2021-22 ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಮಹಿಳೆಯರಿಗೆ ವಿಶೇಷ ಅವಕಾಶಗಳನ್ನು ಕಲ್ಪಿಸಲು ಉದ್ದೇಶಿಸಿ ಮಾಡಲಾದ ಘೋಷಣೆಗಳಲ್ಲಿ ರಾಜ್ಯ ಸರ್ಕಾರದ ಮಹಿಳಾ ನೌಕರರ ಕ್ಷೇಮಾಭಿವೃದ್ಧಿಗಾಗಿ ಹಾಗೂ ಅವರ ಕಾರ್ಯಕ್ಷಮತೆಯನ್ನು ಹೆಚ್ಚಿಸುವ ಉದ್ದೇಶದಿಂದ ಶಿಶುಪಾಲನಾ ರಜೆಯ ಸೌಲಭ್ಯವನ್ನು ಕಲ್ಪಿಸುವ ಘೋಷಣೆಯನ್ನು ಮಾಡಲಾಗಿದ್ದು, ಅದರ ಅನುಸರಣಾ ಕ್ರಮವಾಗಿ ದಿನಾಂಕ:21/06/2021ರ ಶಿಶುಪಾಲನಾ ರಜೆ ಮಂಜೂರಾತಿ ಆದೇಶ ಹೊರಡಿಸಲಾಗಿರುತ್ತದೆ. ಆದುದರಿಂದ, ತಾರತಮ್ಯದ ಪ್ರಶ್ನೆ ಉದ್ಭವಿಸುವುದಿಲ್ಲ.<br>ಮೇಲಿನ ಹಿನ್ನಲೆಯಲ್ಲಿ ಶಿಶುಪಾಲನಾ ರಜೆ ಮಂಜೂರಾತಿ ಆದೇಶವನ್ನು ನಿಲ್ಲಿಸುವ ಅಥವಾ ಮಾರ್ಪಡಿಸುವ ಕುರಿತು ಯಾವುದೇ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ. |

ಬಸವರಾಜ ಬೊಮ್ಮಾಯಿ

ಮುಖ್ಯಮಂತ್ರಿ

ಆಇ 12 ಎಸ್‌ಆರ್‌ಎಸ್ 2022

## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ: ಕರ್ನಾಟಕ ರಾಜ್ಯ ಸರ್ಕಾರಿ ಮಹಿಳಾ ನೌಕರರಿಗೆ ಶಿಶುಪಾಲನಾ ರಜೆ ಮಂಜೂರು ಮಾಡುವ ಕುರಿತು.**

**ಓದಲಾಗಿದೆ: 1. ಸರ್ಕಾರಿ ಆದೇಶ ಸಂಖ್ಯೆ: ಆಇ 1 ಸೇನಿಸೇ 2011, ದಿನಾಂಕ:29.06.2011.**

**ಪ್ರಸ್ತಾವನೆ:**

ಮೇಲೆ ಓದಲಾದ(1)ರ ಆದೇಶದಲ್ಲಿ ಬುದ್ಧಿಮಾಂದ್ಯ/ಅಂಗವಿಕಲ ಮಕ್ಕಳನ್ನು ನೋಡಿಕೊಳ್ಳಲು ರಾಜ್ಯ ಸರ್ಕಾರಿ ಮಹಿಳಾ ನೌಕರರಿಗೆ ವೈದ್ಯಕೀಯ ಮಂಡಳಿಯ ಪ್ರಮಾಣ ಪತ್ರದ ಆಧಾರದ ಮೇಲೆ ಕೆಲವು ಷರತ್ತಿಗೊಳಪಟ್ಟು ಒಂದು ವರ್ಷದಲ್ಲಿ ಮೂರು ಕಂತುಗಳಿಗೆ ಮೀರದಂತೆ ಹಾಗೂ 15 ದಿನಗಳಿಗೆ ಕಡಿಮೆ ಇಲ್ಲದಂತೆ ಇಡೀ ಸೇವಾವಧಿಯಲ್ಲಿ ಎರಡು ವರ್ಷಗಳ ಅವಧಿಗೆ ಅಂದರೆ 730 ದಿನಗಳ ಶಿಶುಪಾಲನಾ ರಜೆಯನ್ನು ಮಂಜೂರು ಮಾಡಲಾಗಿದೆ.

ಪ್ರಸಕ್ತ ಸರ್ಕಾರವು 2021–22ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ–37ರಲ್ಲಿ ರಾಜ್ಯ ಸರ್ಕಾರದ ಮಹಿಳಾ ನೌಕರರಿಗೆ ಚಾಲ್ತಿಯಲ್ಲಿರುವ ಪ್ರಸೂತಿ ರಜೆಯೊಂದಿಗೆ ಒಟ್ಟು ಸೇವಾವಧಿಯಲ್ಲಿ ಆರು ತಿಂಗಳವರೆಗೆ ಅಂದರೆ 180 ದಿನಗಳ ಶಿಶುಪಾಲನಾ ರಜೆಯನ್ನು ಘೋಷಿಸಿದ್ದು, ಈ ಕುರಿತಂತೆ ರಾಜ್ಯ ಸರ್ಕಾರವು ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ: ಆಇ 4(ಇ) ಸೇನಿಸೇ 2021 ಬೆಂಗಳೂರು, ದಿನಾಂಕ: 21.06.2021**

ಕರ್ನಾಟಕ ರಾಜ್ಯ ಸರ್ಕಾರಿ ಮಹಿಳಾ ನೌಕರರಿಗೆ ಈ ಕೆಳಕಂಡ ಷರತ್ತುಗಳ ಮೇರೆಗೆ ಇಡೀ ಸೇವಾವಧಿಯಲ್ಲಿ ಗರಿಷ್ಠ ಆರು ತಿಂಗಳವರೆಗೆ ಅಂದರೆ 180 ದಿನಗಳ "ಶಿಶುಪಾಲನಾ ರಜೆ"ಯನ್ನು, ರಜೆಯನ್ನು ಮಂಜೂರು ಮಾಡುವ ಸಕ್ಷಮ ಪ್ರಾಧಿಕಾರವು ಮಂಜೂರು ಮಾಡತಕ್ಕದ್ದು.

i) ಮಹಿಳಾ ಸರ್ಕಾರಿ ನೌಕರರು ಹೊಂದಿರುವ ಮಕ್ಕಳ ಸಂಖ್ಯೆಯನ್ನು ಪರಿಗಣಿಸದೆ, ಅತ್ಯಂತ ಕಿರಿಯ ಮಗುವು 18 ವರ್ಷ ತಲುಪುವವರೆಗಿನ ಅವಧಿಗೆ ಮಾತ್ರ ಈ ರಜೆಯ ಸೌಲಭ್ಯಕ್ಕೆ ಅರ್ಹರಾಗತಕ್ಕದ್ದು.

ii) ಈ ರಜೆಯ ಅವಧಿಯಲ್ಲಿ ಅವರು ರಜೆಯ ಮೇಲೆ ಹೋಗುವ ನಿಕಟ ಪೂರ್ವದಲ್ಲಿ ಪಡೆಯಲರ್ಹವಿರುವ ಸಂಪೂರ್ಣ ವೇತನಕ್ಕೆ ಸಮನಾದ ರಜೆ ಸಂಬಳಕ್ಕೆ ಅರ್ಹರಾಗತಕ್ಕದ್ದು.

iii) ಪ್ರತಿ ಬಾರಿಯ ಈ ರಜೆ ಮಂಜೂರಾತಿಯು ಕನಿಷ್ಠ 15 ದಿನಗಳಿಗಿಂತ ಕಡಿಮೆ ಇರಬಾರದು.

iv) ಮಹಿಳಾ ಸರ್ಕಾರಿ ನೌಕರರು ಈ ರಜೆಯನ್ನು ಸಾಂದರ್ಭಿಕ ರಜೆಯ ಹೊರತಾಗಿ, ನಿಯಮಾನುಸಾರ ಪಡೆಯಲರ್ಹವಿರುವ ಅಸಾಧಾರಣ ರಜೆಯೂ ಒಳಗೊಂಡಂತೆ ಇತರ ರಜೆಯೊಂದಿಗೆ ಸಂಯೋಜಿಸಿ ಪಡೆಯಬಹುದು.

v) ಈ ರಜೆಯನ್ನು ಯಾವುದೇ ರಜೆ ಲೆಕ್ಕದಿಂದ ಕಳೆಯತಕ್ಕದ್ದಲ್ಲ. ಉಪಯೋಗಿಸಿಕೊಳ್ಳದ ಈ ಸೌಲಭ್ಯದ ಸಂಬಂಧದಲ್ಲಿನ ರಜೆಯನ್ನು ಗಳಿಕೆ ರಜೆ ಲೆಕ್ಕಕ್ಕೆ ಜಮೆಗೊಳಿಸಲು/ನಗದೀಕರಿಸಲು ಅವಕಾಶವಿರುವುದಿಲ್ಲ.

vi) ಬುದ್ಧಿಮಾಂದ್ಯ/ಅಂಗವಿಕಲ ಮಕ್ಕಳನ್ನು ಹೊಂದಿರುವ ಸರ್ಕಾರಿ ಮಹಿಳಾ ನೌಕರರಿಗೆ ಮಂಜೂರು ಮಾಡಿರುವ 730 ದಿನಗಳ ಶಿಶುಪಾಲನಾ ರಜೆ ಸೌಲಭ್ಯಕ್ಕೆ ಅರ್ಹರಾದ ಯಾವುದೇ ನೌಕರರು ಆ ಯೋಜನೆಯನ್ನು ಆಯ್ಕೆ ಮಾಡಿಕೊಳ್ಳತಕ್ಕದ್ದು. ಅದರೊಂದಿಗೆ ಈ ಯೋಜನೆಯಡಿಯಲ್ಲಿನ ಸೌಲಭ್ಯಕ್ಕೂ ಅರ್ಹರಾಗತಕ್ಕದ್ದಲ್ಲ.

vii) ಶಿಶುಪಾಲನಾ ರಜೆಯ ಮಂಜೂರಾತಿಗಾಗಿ ಯಾವುದೇ ಪೂರಕ ದಾಖಲೆಗಳನ್ನು ಪಡೆಯುವ ಅವಶ್ಯಕತೆಯಿರುವುದಿಲ್ಲ. ಸೇವಾ ಪುಸ್ತಕದಲ್ಲಿ ನಮೂದಿಸಿರುವ ಮಕ್ಕಳ ವಿವರಗಳ ಆಧಾರದ ಮೇಲೆ ಮಂಜೂರು ಮಾಡತಕ್ಕದ್ದು.

viii) ಈ ಪೂರ್ವದಲ್ಲಿ ಮಂಜೂರಾಗಿರುವ ಯಾವುದೇ ಬಗೆಯ ರಜೆಯನ್ನು ಶಿಶುಪಾಲನಾ ರಜೆಯಾಗಿ ಪರಿವರ್ತಿಸತಕ್ಕದ್ದಲ್ಲ. ಈ ಆದೇಶದಡಿಯಲ್ಲಿನ ಸೌಲಭ್ಯವು ಆದೇಶವನ್ನು ಹೊರಡಿಸಿದ ದಿನಾಂಕದಿಂದ ಜಾರಿಗೊಳ್ಳತಕ್ಕದ್ದು.

ix) ಈ ರಜೆಯನ್ನು ಮಂಜೂರು ಮಾಡುವ ಸಕ್ಷಮವಾದ ಪ್ರಾಧಿಕಾರವು ಶಿಶುಪಾಲನಾ ರಜೆಯ ಮಂಜೂರಾತಿಯನ್ನು ಸೇವಾ ಪುಸ್ತಕದಲ್ಲಿ ದಾಖಲು ಮಾಡುವುದು ಮತ್ತು ನಿಗಧಿತ ನಮೂನೆಯಲ್ಲಿ ಲೆಕ್ಕವಿಡಬೇಕು.(ವಿಶೇಷ ಮಕ್ಕಳ ಶಿಶುಪಾಲನಾ ರಜೆಯ ಲೆಕ್ಕವನ್ನಿಡುವ ಪ್ರಪತ್ರದ ಮಾದರಿಯಲ್ಲಿ)

ಈ ಬಗ್ಗೆ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳಿಗೆ ಪ್ರತ್ಯೇಕವಾಗಿ ಸೂಕ್ತ ತಿದ್ದುಪಡಿ ತರಲಾಗುವುದು.

**ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ**
**ಮತ್ತು ಅವರ ಹೆಸರಿನಲ್ಲಿ**

**(ಬಿ.ಎಸ್.ಸುವರ್ಣ),**
**ಸರ್ಕಾರದ ಉಪ ಕಾರ್ಯದರ್ಶಿ,**
**ಆರ್ಥಿಕ ಇಲಾಖೆ (ಸೇವೆಗಳು-1).**

**ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು, ಮುಂದಿನ ರಾಜ್ಯಪತ್ರದಲ್ಲಿ ಪ್ರಕಟಿಸುವುದಕ್ಕಾಗಿ ಹಾಗೂ 50 ಪ್ರತಿಗಳನ್ನು ಆರ್ಥಿಕ ಇಲಾಖೆಗೆ ಸರಬರಾಜು ಮಾಡಲು ಕೋರಿ ಕಳುಹಿಸಿದೆ.**

**ಪ್ರತಿ:**

1. ಪ್ರಧಾನ ಮಹಾಲೇಖಪಾಲರು (ಜಿ & ಎಸ್‌ಎಸ್‌ಎ), ಕರ್ನಾಟಕ, ಹೊಸ ಕಟ್ಟಡ, "ಆಡಿಟ್ ಭವನ", ಪೋಸ್ಟ್‌ಬಾಕ್ಸ್ ಸಂಖ್ಯೆ-5398, ಬೆಂಗಳೂರು-560001
2. ಮಹಾಲೇಖಪಾಲರು (ಇ & ಆರ್‌ಎಸ್‌ಎ). ಕರ್ನಾಟಕ ಹೊಸ ಕಟ್ಟಡ, "ಆಡಿಟ್ ಭವನ", ಪೋಸ್ಟ್‌ಬಾಕ್ಸ್ ಸಂಖ್ಯೆ-5398, ಬೆಂಗಳೂರು-560001
3. ಮಹಾಲೇಖಪಾಲರು (ಎ & ಇ), ಕರ್ನಾಟಕ, ಪೋಸ್ಟ್‌ಬಾಕ್ಸ್ ಸಂಖ್ಯೆ-5329/5369, ಪಾರ್ಕ ಹೌಸ್ ರೋಡ್, ಬೆಂಗಳೂರು.
4. ಸರ್ಕಾರದ ಮುಖ್ಯ ಕಾರ್ಯದರ್ಶಿಗಳು/ಅಪರಮುಖ್ಯ ಕಾರ್ಯದರ್ಶಿಗಳು.
5. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು.
6. ಎಲ್ಲಾ ಇಲಾಖಾ ಮುಖ್ಯಸ್ಥರುಗಳಿಗೆ.
7. ಎಲ್ಲಾ ಜಿಲ್ಲಾಧಿಕಾರಿಗಳು.
8. ಪ್ರಾದೇಶಿಕ ಆಯುಕ್ತರು, ಬೆಂಗಳೂರು/ಮೈಸೂರು/ಬೆಳಗಾವಿ/ಗುಲ್ಬರ್ಗ.
9. ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.
10. ರಿಜಿಸ್ಟ್ರಾರ್ ಜನರಲ್, ಕರ್ನಾಟಕ ಉಚ್ಚನ್ಯಾಯಾಲಯ, ಬೆಂಗಳೂರು.
11. ರಿಜಿಸ್ಟ್ರಾರ್, ಕರ್ನಾಟಕ ಲೋಕಾಯುಕ್ತ, ಬಹುಮಹಡಿ ಕಟ್ಟಡ, ಬೆಂಗಳೂರು.
12. ರಿಜಿಸ್ಟ್ರಾರ್, ಕರ್ನಾಟಕ ಆಡಳಿತ ನ್ಯಾಯಮಂಡಳಿ, ಕಂದಾಯ ಭವನ, ಬೆಂಗಳೂರು.
13. ಕಾರ್ಯದರ್ಶಿ, ಕರ್ನಾಟಕ ಲೋಕಸೇವಾ ಆಯೋಗ, ಬೆಂಗಳೂರು.
14. ಕಾರ್ಯದರ್ಶಿ, ಕರ್ನಾಟಕ ವಿಧಾನಸಭೆ/ವಿಧಾನ ಪರಿಷತ್ತು, ಬೆಂಗಳೂರು.
15. ಖಜಾನೆ ಅಧಿಕಾರಿ, ರಾಜ್ಯ ಹುಜೂರು ಖಜಾನೆ/ಜಿಲ್ಲಾ ಖಜಾನೆಗಳು.
16. ಯೋಜನಾ ನಿರ್ದೇಶಕರು, ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆ, ವಿಕಾಸಸೌಧ, ಬೆಂಗಳೂರು.
17. ಪ್ರಾಜೆಕ್ಟ್‌ಆಫೀಸರ್, ಹೆಚ್.ಆರ್.ಎಂ.ಎಸ್, ಕೊಠಡಿ ಸಂಖ್ಯೆ:145-ಎ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
18. ಕಾರ್ಯದರ್ಶಿ, ಕನ್ನಡ ಅಭಿವೃದ್ಧಿ ಪ್ರಾಧಿಕಾರ, ವಿಧಾನಸೌಧ, ಬೆಂಗಳೂರು.
19. ಅಧ್ಯಕ್ಷರು, ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ, ಕಬ್ಬನ್ ಉದ್ಯಾನವನ, ಬೆಂಗಳೂರು.
20. ಕರ್ನಾಟಕ ಸರ್ಕಾರ ಸಚಿವಾಲಯದ ಎಲ್ಲಾ ಶಾಖೆಗಳು.
21. ಕರ್ನಾಟಕ ಸರ್ಕಾರಿ ಸಚಿವಾಲಯದ ಗ್ರಂಥಾಲಯ; ವಿಧಾನ ಮಂಡಲದ ಗ್ರಂಥಾಲಯ.
22. ವಾರಪತ್ರ/ಶಾಖೆಯ ರಕ್ಷಾ ಕಡತ.

**[ಕ್ರಮ ಸಂಖ್ಯೆ:1 ರಿಂದ 3 ಹಾಗೂ 10 ರಿಂದ 17 ರವರೆಗೆ ನಮೂದಿತವಾದ ಅಧಿಕಾರಿಗಳಿಗೆ ಪತ್ರದ ಮೂಲಕ].**

**ಕರ್ನಾಟಕ ಸರ್ಕಾರದ ಅಧಿಕೃತ ಅಂತರ್ಜಾಲ ತಾಣ www.finance.karnataka.gov.in ವೀಕ್ಷಿಸಿ.**

## ವಿಭಾಗ–4 ಪ್ರಸೂತಿ (ಹೆರಿಗೆ) ರಜೆ (Maternity Leave)

135 (1) ಮಹಿಳಾ ಸರ್ಕಾರಿ ನೌಕರರಿಗೆ ಸಕ್ಷಮ ಅಧಿಕಾರಿಯು ಪ್ರಸೂತಿ (ಹೆರಿಗೆ) ರಜೆಯನ್ನು ಆರಂಭದ ದಿನಾಂಕದಿಂದ *180 ದಿನಗಳವರೆಗೆ ಮಂಜೂರು ಮಾಡಬಹುದು. ರಜೆಯ ಅವಧಿಯಲ್ಲಿ ಆಕೆಗೆ ರಜೆಯ ಮೇಲೆ ಹೋಗುವ ನಿಕಟಪೂರ್ವದಲ್ಲಿ ಪಡೆಯುತ್ತಿದ್ದ ವೇತನಕ್ಕೆ ಸಮನಾದ ರಜೆ ವೇತನವನ್ನು ನೀಡತಕ್ಕದ್ದು.

(2) ಉಪನಿಯಮ(1) ರ ಮೇರೆಗೆ ಪ್ರಸೂತಿ ರಜೆಯನ್ನು ಗರ್ಭಸ್ರಾವ, ಅಥವಾ ಗರ್ಭಪಾತ, ಗರ್ಭಧಾರಣೆಯ ವೈದ್ಯಕೀಯ ಪರ್ಯಾವಸಾನ ಅಧಿನಿಯಮ 1971ರ ಮೇರೆಗೆ ಪ್ರೇರಣೆಯಿಂದ ಮಾಡಿಸಿಕೊಂಡ ಗರ್ಭಪಾತವೂ ಸೇರಿದ ಸಂದರ್ಭದಲ್ಲಿ :–

(ಎ) ರಜೆಯು ಆರು ವಾರಗಳನ್ನು ಮೀರಬಾರದು ಮತ್ತು

(ಬಿ) ಇಂತಹ ರಜೆಗಾಗಿ ಸಲ್ಲಿಸಿದ ಅರ್ಜಿಯು ನೋಂದಾಯಿತ ವೃತ್ತಿನಿರತ ವೈದ್ಯರಿಂದ ಪಡೆದ ಪ್ರಮಾಣಪತ್ರದಿಂದ ಸಮರ್ಥಿತವಾಗಿರಬೇಕು ಎಂಬ ಷರತ್ತುಗೊಳಪಟ್ಟು ಮಂಜೂರು ಮಾಡಬಹುದು.

(3) ಎರಡು ಅಥವಾ ಹೆಚ್ಚು ಜೀವಂತ ಮಕ್ಕಳನ್ನು ಹೊಂದಿರುವ ಮಹಿಳಾ ಸರ್ಕಾರಿ ನೌಕರಳಿಗೆ ಮೇಲಿನ (1) ಅಥವಾ (2) ನೇ ಉಪನಿಯಮದ ಮೇರೆಗೆ ಪ್ರಸೂತಿ ರಜೆಯನ್ನು ಅನುಮತಿಸತಕ್ಕದ್ದಲ್ಲ.

(4) (ಎ) ಪ್ರಸೂತಿ ರಜೆಯನ್ನು ಬಿಡುವಿನ ರಜೆ ಅಥವಾ ಇನ್ನಾವುದೇ ರೀತಿಯ ರಜೆಯೊಂದಿಗೆ ಸೇರಿಸಬಹುದು. ವೈದ್ಯಕೀಯ ಪ್ರಮಾಣಪತ್ರವನ್ನು ಹಾಜರು ಪಡಿಸದೇ ಇದ್ದರೂ 60 ದಿನಗಳಿಗೆ ಮೀರದಂತೆ ಇಂಥ ರಜೆಯನ್ನು ಮಂಜೂರು ಮಾಡಬಹುದು.

(ಬಿ) (4)ನೇ ಉಪನಿಯಮದ (ಎ) ಖಂಡದ ಮೇರೆಗೆ ಮಂಜೂರಾದ ರಜೆಯನ್ನು ಮುಂದುವರಿಸಿ ಹೆಚ್ಚಿನ ರಜೆಯನ್ನು ಅಧಿಕೃತ ವೈದ್ಯಕೀಯ ಸಹಾಯಕರು ನೀಡುವ ವೈದ್ಯಕೀಯ ಪ್ರಮಾಣಪತ್ರವನ್ನು ಹಾಜರುಪಡಿಸುವುದಕ್ಕೊಳಪಟ್ಟು

* ಸ.ಆ.ಸಂಖ್ಯೆ : ಆಇ 05 ಎಸ್‌ಆರ್‌ಎ 2012 ದಿ: 29.01.2014ರ ಮೂಲಕ ಪ್ರಕಟಿಸಿದ (ದಿ. 01.04.2014 ರಿಂದ ಜಾರಿಗೆ ಬಂದಿದೆ)

ಕಾಯಿಲೆ ಇರುವ ಸರ್ಕಾರಿ ನೌಕರಗಳಿಗೆ ಮಂಜೂರು ಮಾಡಬಹುದು. ಆದರೆ ಅಂಥ ಮಗುವಿಗೆ ತಾಯಿಯ ವೈಯಕ್ತಿಕ ಗಮನದ ಮತ್ತು ಮಗುವಿನ ಹತ್ತಿರ ತಾಯಿ ಇರುವುದು ತುಂಬಾ ಅವಶ್ಯಕತೆ ಇರುವುದೆಂಬುದನ್ನು ಅಧಿಕೃತ ವೈದ್ಯಕೀಯ ಸಹಾಯಕರು ನೀಡುವ ವೈದ್ಯಕೀಯ ಪ್ರಮಾಣಪತ್ರ ಹಾಜರುಪಡಿಸಿರಬೇಕು.

(5) ಪ್ರಸೂತಿ ರಜೆಯನ್ನು ಯಾವುದೇ ರಜೆಯ ಲೆಕ್ಕದಿಂದ ಕಳೆಯತಕ್ಕದ್ದಲ್ಲ.

~~* **135A ಮಗುವನ್ನು ದತ್ತು ತೆಗೆದುಕೊಂಡಾಗ ಮಹಿಳಾ ಸರ್ಕಾರಿ ನೌಕರರುಗಳಿಗೆ ರಜೆ :** ಮಹಿಳಾ ಸರ್ಕಾರಿ ನೌಕರಳು ಮಗುವೊಂದನ್ನು ದತ್ತು ತೆಗೆದುಕೊಂಡಾಗ, ಒಂದು ವರ್ಷದ ಅಥವಾ ದತ್ತಕ ಮಗುವಿಗೆ ಒಂದು ವರ್ಷ ವಯಸ್ಸಾಗುವವರೆಗೆ ಇವುಗಳಲ್ಲಿ ಯಾವುದು ಕಡಿಮೆಯೋ ಅವರೆಗೆ ದೊರೆಯಬಹುದಾದ ಮತು ಅನುಮತಿಸಬಹುದಾದ ರಜೆಯನ್ನು (60 ದಿವಸಗಳನ್ನು ಮೀರದಂತೆ ವೈದ್ಯಕೀಯ ಪ್ರಮಾಣಪತ್ರವನ್ನು ಹಾಜರು ಪಡಿಸದೆ ಪರಿವರ್ತಿತ ರಜೆ ಮತ್ತು (ಗಳಿಸದ ರಜೆ ಸೇರಿದಂತೆ) ಅಂತಹ ಮಹಿಳಾ ಸರ್ಕಾರಿ ನೌಕರಳು ದತ್ತಕದ ಸಮಯದಲ್ಲಿ ಎರಡು ಜೀವಂತ ಮಕ್ಕಳನ್ನು ಹೊಂದಿರತಕ್ಕದ್ದಲ್ಲ ಎಂಬ ಷರತ್ತಿಗೊಳಪಟ್ಟು, ಮಂಜೂರು ಮಾಡತಕ್ಕದ್ದು.'~~

* ಸ.ಆ.ಸಂಖ್ಯೆ : ಸಿಆಸುಇ 02 ಎಸ್‌ಆರ್‌ಎ 93 ದಿ: 25.05.1995ರ ಮೂಲಕ ಸೇರಿಸಲಾಗಿದೆ (ದಿ. 01.07.1995 ರಿಂದ ಜಾರಿಗೆ ಬಂದಿದೆ)

ಅನುಬಂಧ-3



## * ವಿಭಾಗ – IV ಎ ಪಿತೃತ್ವ ರಜೆ (Paternity Leave)

135ಬಿ (1) ರಜೆಯನ್ನು ಮಂಜೂರು ಮಾಡುವ ಸಕ್ಷಮ ಅಧಿಕಾರಿಯು ಪುರುಷ ಸರ್ಕಾರಿ ನೌಕರನಿಗೆ ಅವನ ಪತ್ನಿಯ ಹೆರಿಗೆಯ ಪ್ರಾರಂಭದಲ್ಲಿ 15 ದಿನಗಳ ಕಾಲ ಪಿತೃತ್ವ ರಜೆಯನ್ನು ಮಂಜೂರು ಮಾಡಬಹುದು.

(2) ಈ ರಜೆಯ ಅವಧಿಯಲ್ಲಿ ಅವನು ರಜೆ ಹೋಗುವುದಕ್ಕೆ ನಿಕಟಪೂರ್ವದಲ್ಲಿ ಪಡೆಯುತ್ತಿದ್ದ ವೇತನಕ್ಕೆ ಸಮನಾದ ರಜೆಯ ವೇತನವನ್ನು ನೀಡಲಾಗುವುದು.

(3) ಎರಡು ಅಥವಾ ಅದಕ್ಕಿಂತ ಹೆಚ್ಚು ಜೀವಂತ ಮಕ್ಕಳಿರುವ ಪುರುಷ ಸರ್ಕಾರಿ ನೌಕರನಿಗೆ ಈ ಸೌಲಭ್ಯ ದೊರೆಯತಕ್ಕದ್ದಲ್ಲ.

(4) ಪಿತೃತ್ವ ರಜೆಯನ್ನು ಯಾವುದೇ ರಜೆಯ ಲೆಕ್ಕದಿಂದ ಕಳೆಯತಕ್ಕದ್ದಲ್ಲ ಹಾಗೂ ಸಾಂದರ್ಭಿಕ ರಜೆಯ ಹೊರತುಪಡಿಸಿ ಇತರ ಯಾವುದೇ ರಜೆಯೊಂದಿಗೆ ಸಂಯೋಜಿಸಬಹುದಾಗಿದೆ.

(5) ಪಿತೃತ್ವ ರಜೆಯನ್ನು ನಗದೀಕರಣಗೊಳಿಸಲು ಅಥವಾ ಗಳಿಕೆ ರಜೆಯೊಂದಿಗೆ ವಿಲೀನಗೊಳಿಸಲು ಆಗುವುದಿಲ್ಲ.

6. ಸಾಮಾನ್ಯವಾಗಿ ಈ ರಜೆಯನ್ನು ನಿರಾಕರಿಸುವಂತಿಲ್ಲ.

---

* ಅ.ಸಂಖ್ಯೆ : ಎಫ್‌ಡಿ 04 ಎಸ್‌ಆರ್‌ಎ 99 ದಿ 02.06.2000ರ ಮೂಲಕ ಸೇರಿಸಲಾಗಿದೆ (ದಿ. 01.01.1999 ರಿಂದ ಜಾರಿಗೆ ಬಂದಿದೆ)

ನಿರ್ವಹಣೆಗೆ ವ್ಯವಸ್ಥೆ ಮಾಡುವುದಕ್ಕಾಗಿ ಸರ್ಕಾರಿ ನೌಕರನ ಗೈರುಹಾಜರಿಯ ಅವಧಿಯ ಸಂಬಂಧದಲ್ಲಿ ಅವನ ಭತ್ಯೆಗಳಲ್ಲಿ ಯಾವುದೇ ಕಡಿತವನ್ನು ಮಾಡತಕ್ಕದ್ದಲ್ಲ. ಇಂಥ ರಜೆಗಾಗಿ ಪ್ರತಿಯೊಂದು ಪರೀಕ್ಷೆಗೆ ಎರಡಕ್ಕಿಂತ ಹೆಚ್ಚು ಸಲ ಅನುಮತಿ ನೀಡತಕ್ಕದ್ದಲ್ಲ.

**ವಿನಾಯಿತಿ :–** ಸಬಾರ್ಡಿನೇಟ್ ಅಕೌಂಟ್ಸ್ ಸರ್ವಿಸ್ (S.A.S) ಮತ್ತು ಟ್ರೆಜರಿ ಅಕೌಂಟ್ಸ್‌ಗಳಂಥ, ಬೆಂಗಳೂರು, ಮೈಸೂರು, ಬೆಳಗಾವಿ, ಗುಲ್ಬರ್ಗ ಮಾತ್ರವೇ ಪರೀಕ್ಷಾ ಕೇಂದ್ರವಾಗಿರುವಂಥ ಪರೀಕ್ಷೆಗಳಿಗೆ ಹಾಜರಾಗುವ ಸರ್ಕಾರಿ ನೌಕರ ಇಡೀ ಪರೀಕ್ಷೆಗೆ ಹಾಜರಾಗಲಿ ಅಥವಾ ಅವನಿಗೆ ಅದರ ಒಂದು ಭಾಗ ಅಥವಾ ಅವರಲ್ಲಿ ಸಮಾವೇಶವಾಗುವ ಭಾಗಗಳಿಗೆ ಹಾಜರಾಗಲಿ ಮೊದಲು ಮೂರು ಅವಕಾಶಗಳಿಗೆ ಪರೀಕ್ಷೆಗೆ ಹಾಜರಾಗಲು, ಬೆಂಗಳೂರು, ಮೈಸೂರು, ಬೆಳಗಾವಿ ಅಥವಾ ಗುಲ್ಬರ್ಗಕ್ಕೆ ಪ್ರಯಾಣ ಮಾಡಲು ಮತ್ತು ಅಲ್ಲಿಂದ ತನ್ನ ಕಚೇರಿ ಇರುವ ಸ್ಥಳಕ್ಕೆ ಹಿಂತಿರುಗಲು ವಾಸ್ತವವಾಗಿ ಮತ್ತು ಅವಶ್ಯವಿರುವಷ್ಟು ವಿಶೇಷ ರಜೆಯಲ್ಲಿ ಅನುಮತಿ ನೀಡಬಹುದು.

134.ಎ ಈ ಪ್ರಕರಣದಲ್ಲಿ ಇರುವ ನಿಯಮಗಳೂ ಮತ್ತು ಈ ನಿಯಮಗಳಲ್ಲಿಯ 8ನೆಯ ನಿಯಮದ (15) ನೆಯ ಉಪನಿಯಮದ (ಡಿ) ಖಂಡಗಳ ಉದ್ದೇಶಕ್ಕಾಗಿ ಪರೀಕ್ಷೆ ಅಥವಾ ಟೆಸ್ಟನ್ನು ವೇತನ ಬಡ್ತಿ ಅಥವಾ ಸೇವಾ ಬಡ್ತಿ ಅಥವಾ ನೌಕರಿಯ ಖಾಯಂಗೆ ಸಂಬಂಧಪಟ್ಟಂತೆ ಷರತ್ತಾಗಿ ನಿಯಮಿಸಲಾಗಿದ್ದರೆ, ಅದು ಕಡ್ಡಾಯವೆಂದು ಭಾವಿಸತಕ್ಕದ್ದು. ಪರೀಕ್ಷಾ ರಜೆಯು ಸಾಮಾನ್ಯ ಅರ್ಥದಲ್ಲಿ ರಜೆ ಅಲ್ಲ, ಸೇವೆಯ ಲಾಭವನ್ನು ಪಡೆಯಲು ಕಡ್ಡಾಯ ಪರೀಕ್ಷೆಗೆ ಹಾಜರಾಗುವುದಕ್ಕಾಗಿ ಸಂಬಂಧಪಟ್ಟ ಸರ್ಕಾರಿ ನೌಕರನು ಕಚೇರಿಗೆ ಗೈರುಹಾಜರಾಗಲು ಅನುಮತಿ ಪಡೆಯತಕ್ಕದ್ದು. ಪ್ರತಿಯೊಂದು ಅಂಥ ಕಡ್ಡಾಯ ಪರೀಕ್ಷೆ ಅಥವಾ ಇಲಾಖಾ ಪರೀಕ್ಷೆಯ ಸಂಬಂಧದಲ್ಲಿ ಅಂಥ ಅನುಮತಿಯನ್ನು ಕೇವಲ ಎರಡು ಬಾರಿ ಮಾತ್ರ ನೀಡತಕ್ಕದ್ದು. ಈ ನಿಯಮಗಳಲ್ಲಿಯ 134ನೆಯ ನಿಯಮದ ಅಪವಾದದ ಉಪಬಂಧಗಳಿಗೆ ಒಳಪಟ್ಟು ಇಂಥ ಗೈರುಹಾಜರಿಯನ್ನು ಕರ್ತವ್ಯವೆಂದು ಪರಿಗಣಿಸದಿರುವಲ್ಲಿ ಸರ್ಕಾರಿ ನೌಕರನು ತನ್ನ ಲೆಕ್ಕದಲ್ಲಿರುವ ಮತ್ತು ತನಗೆ ಅನುಮತಿ ಇರುವ ಅಂಥ ಪ್ರಕಾರದ ರಜೆಗಾಗಿ ಅರ್ಜಿ ಸಲ್ಲಿಸಬೇಕಾಗುತ್ತದೆ.[2]